ಪಟ್ಟು ಆದ್ಯತೆ, ಗೌರವ, ಮಹತ್ವ. ಗೀತರಚನಕಾರ ಭಾರತೀಯ ಚಿತ್ರರಂಗದಲ್ಲಿ ಒಬ್ಬ ಕುಶಲ ಕಲೆ ಕಲಿತ ಟೈಲರ್!! (ಸಿಂಪಿಗ, ಅಷ್ಟೇ! ಹೇಗೆ ಕಾವ್ಯ ಆದೀತು?)

ಸಿನಿಮಾ ವ್ಯಾಕರಣ ಬೇರೆ, ಸಾಹಿತ್ಯದ/ ಕಾವ್ಯದ ವ್ಯಾಕರಣ ಬೇರೆ! ಹೀಗಾಗಿ ಎರಡನ್ನೂ ಬೆರೆಸಿ ಮೌಲ್ಯಮಾಪನ ಮಾಡುವುದು ತರವಲ್ಲ.

ಸಿನಿಮಾ ಹಾಡುಗಳಲ್ಲೂ ಕವಿಗಳ ಕವಿತೆಗಳಿಗೂ ಮಿಗಿಲಾದ ಉಪಮೆ, ಉಪಮಾನಗಳು, ನಾಣ್ನುಡಿಗಳು, ಅನುಬಂಧಗಳೂ, ವಿನೂತನ ಅಭಿವ್ಯಕ್ತಿಗಳೂ, ಪ್ರಾಸಾನು ಪ್ರಾಸಗಳೂ ಇವೆ. ನೂರಾರು ಉದಾಹರಣೆಗಳನ್ನು ಕನ್ನಡ ಚಿತ್ರರಂಗದಿಂದ ನಾವು ಎತ್ತಿಕೊಡಬಹುದು. ನಿದರ್ಶನ ನೀಡಿ ವಾದವನ್ನು ನಾವು ಸಮರ್ಥಿಸಿಕೊಳ್ಳಬಹುದು.

ಆದರೆ 'ಕಾವ್ಯಾತ್ಮಕ' ಆಗಿರುವ 'ಹಾಡುಗಳು' ಕಡಿಮೆ. ವಿರಳ. ಸಿನಿಮಾ ಹಾಡು ಫಂಕ್ಷನಲ್ (Functional Poetry). ಅದು ಕಲಾತ್ಮಕ ಕಾವ್ಯ (Artistic Poem) ಆಗುವುದು ನಿಜಕ್ಕೂ ಅಪರೂಪ.

ಹೀಗಾಗಿ ಗೀತರಚನಕಾರರ ರಚನೆಗಳನ್ನು ಸಾಹಿತ್ಯ ವಿಮರ್ಶಕರು ತಮ್ಮ ವಿಮರ್ಶಾ ಪರಿಧಿಗೆ ಇದುವರೆಗೂ ಸೇರಿಸಿಲ್ಲ. ಇದು ಸತ್ಯಸ್ಯ ಸತ್ಯ! ಈಗ ಸಿನಿಮಾ ಕೂಡ ಅಧ್ಯಯನ ವಿಷಯವಾಗಿ ನಮ್ಮ ವಿಶ್ವವಿದ್ಯಾಲಯಗಳಲ್ಲಿ ಅಳವಡಿಕೆ ಆಗುತ್ತಿದೆ. ಅಲ್ಲಿನ 'ನಿಕಷ' ಬೇರೆಯದೇ ಆಗಿರುತ್ತದೆ. ಹಾಡನ್ನು ಶುದ್ಧ ಸಾಹಿತ್ಯವಾಗಿ ನೋಡಬೇಕಾಗಿಲ್ಲ.

ನನ್ನ ಅನುಭವದಲ್ಲಿ ಹೇಳುವುದಾದರೆ ನಾನು ಮೊದಲು ಬರೆದು ಕೊಟ್ಟು ಅದಕ್ಕೆ ಸಂಗೀತ ನಿರ್ದೇಶಕರು ರಾಗ ಸಂಯೋಜನೆ ಮಾಡಿದ ಗೀತೆಗಳು ಕಾವ್ಯವಾಗಿಯೂ ರಸಿಕರಿಂದ ಅವರ ಶುದ್ಧ ಅಭಿರುಚಿಗಳಿಂದ ಮಾನ್ಯತೆ ಪಡೆದಿವೆ.

ನಿದರ್ಶನಕ್ಕೆ...

1. 'ಜನ್ಮ ನೀಡಿದ ಭೂತಾಯಿಯ ನಾ ಹೇಗೆ ತಾನೆ ಮರೆಯಲಿ?' (ಪಡುವಾರಹಳ್ಳಿ ಪಾಂಡವರು), ನಿರ್ದೇಶನ: ಪುಟ್ಟಣ್ಣ ಕಣಗಾಲ್, ಸಂಗೀತ ವಿಜಯ ಭಾಸ್ಕರ್, ಗಾಯನ: ಎಸ್.ಪಿ.ಬಿ.
2. 'ತೇರನೇರಿ ಅಂಬರದಾಗೆ ನೇಸರ ನಗುತಾನೆ' (ಚಿತ್ರ: ಪರಸಂಗದ ಗೆಂಡೆತಿಮ್ಮ, ನಿರ್ದೇಶನ: ಮಾರುತಿ ಶಿವರಾಂ, ಸಂಗೀತ: ರಾಜನ್–ನಾಗೇಂದ್ರ)
3. 'ನಮ್ಮೂರ ಮಂದಾರ ಹೂವೇ, ನನ್ನೊಲುಮೆ ಬಾಂದಳದ ಚಲುವೇ!' (ಚಿತ್ರ: ಆಲೆಮನೆ, ಸಂಗೀತ: ಸಿ. ಅಶ್ವತ್ಥ್, ಗಾಯನ: ಎಸ್.ಪಿ. ಬಾಲಸುಬ್ರಹ್ಮಣಂ)
4. ನಾ ಕಂಡೆ ನಿನ್ನ ಮಧುರ ಮಧುರ ಗಳಿಗೆಯಲಿ/ ನೀ ತಂದೆ ಲಾಸ್ಯ ಪಲುಕು ತಲುಕು ಹೆಜ್ಜೆಯಲಿ (ಚಿತ್ರ: ಕೃಷ್ಣ ರುಕ್ಮಿಣಿ: ಸಂಗೀತ: ಕೆ.ವಿ. ಮಹಾದೇವನ್, ಗಾಯನ: ಎಸ್‌ಪಿಬಿ ಮತ್ತು ವಾಣೀ ಜಯರಾಂ)
5. ಕನ್ನಡ ನಾಡಿನ ರನ್ನದ ರತುನ ಕೇಳೋ ಕಥೆಯನ್ನ/ ನಾ ಹೇಳೋ ಕಥೆಯನ್ನ (ಚಿತ್ರ: ಶರವೇಗದ ಸರದಾರ, ಸಂಗೀತ: ಸಂಗೀತರಾಜ, ಗಾಯನ: ಎಸ್.ಪಿ.ಬಿ.)
6. ನೀಲಿಯ ಬಾನಿಂದ ತಾರೆಯ ಊರಿಂದ/ ತೇಲುತ ಬಂದನು ಚಂದಮಾಮಾ (ಚಿತ್ರ: ಟೋನಿ, ಸಂಗೀತ: ರಾಜನ್ ನಾಗೇಂದ್ರ, ಗಾಯನ: ರವಿ (ಕೆ.ಎಸ್.ಎಲ್. ಸ್ವಾಮಿ) ಮತ್ತು ನಾಗೇಂದ್ರಪ್ಪ)
7. ನಾನೊಂದು ತೀರ, ನೀನೊಂದು ತೀರ/ ಮನಸು ಮನಸು ದೂರ/ ಪ್ರೀತಿ ಹೃದಯ ಭಾರ!/ (ಚಿತ್ರ: ಅರುಣರಾಗ, ಸಂಗೀತ: ರಂಗರಾವ್, ಗಾಯನ: ಜೇಸುದಾಸ್, ಚಿತ್ರಾ)

ಹೀಗೆ ಪಟ್ಟಿ ಮಾಡಬಹುದು. ನಾನು ಕನ್ನಡ ನಾಡಿನ ವಿಮರ್ಶಕರನ್ನು ಕೇಳುವುದಿಷ್ಟೆ, ಇವು ಕನ್ನಡ